Government of Karnataka

Deposition Sheet Form No. R.P. 57

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಲಿಂಗಸಗೂರ

ಸಿ/ ಸಿ ನಂಬರಃ 11/2025

ಸಿ ಡಬ್ಲ್ಯೂ- 08
ಪಿ ಡಬ್ಲ್ಯೂ- 03

| | |
|---|---|
| ಸಾಕ್ಷಿದಾರರ ಹೆಸರು | ಃ- ಹನುಮಪ್ಪ |
| ತಂದೆಯ ಹೆಸರು | ಃ- ಹನುಮಪ್ಪ ಹಾಲಭಾವಿ |
| ವಯಸ್ಸು | ಃ- 60 ವರ್ಷ |
| ಉದ್ಯೋಗ | ಃ- ಒಕ್ಕಲುತನ |
| ವಾಸಸ್ಥಳ | ಃ- ಯರಗೋಡಿ |

**ದಿ.18-06-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

***ಮುಖ್ಯ ವಿಚಾರಣೆ: ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.***

ಚಾ.ಸಾ-1 ನನ್ನ ಅಣ್ಣ. ಮೃತ ಬಸಪ್ಪ ನನ್ನ ಅಣ್ಣನ ಮಗ. ಚಾ.ಸಾ-2 ರಿಂದ 5 ನಮ್ಮೂರಿನವರು. ಚಾ.ಸಾ-6 ಮತ್ತು 7 ನನ್ನ ಅಣ್ಣನ ಮಕ್ಕಳು. ಚಾ.ಸಾ-9 ಮೃತನ ಹೆಂಡತಿ. ಚಾ.ಸಾ-10 ಮತ್ತು 11 ನಮ್ಮೂರಿನವರು. 1ನೇ ಆರೋಪಿ ನನ್ನ ಅಳಿಯ. 2ನೇ ಆರೋಪಿ ನಮ್ಮೂರಿನವರು.

ಸುಮಾರು ಒಂದುವರೆ ವರ್ಷದ ಹಿಂದೆ ನನ್ನ ಅಣ್ಣನ ಮಗ ನಾಗಪ್ಪನ ಮನೆಯ ಮುಂದಿನ ಲೈಟಿನ ಕಂಬಕ್ಕೆ ಹೊಸ ಬಲ್ಪ್ ಹಾಕಲು ಹೋದಾಗ ಕರೆಂಟ್ ಶಾಕ್ ಹೊಡೆದು ಮೃತಪಟ್ಟಿರುತ್ತಾನೆ. ಸದರಿ ಕೃತ್ಯವು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ನಿರ್ಲಕ್ಷವನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ವೈಯಕ್ತಿಕ ಮಾಹಿತಿ ಇಲ್ಲ. ನಾನು ಪೋಲಿಸರ ಮುಂದೆ ಯಾವುದೇ ಹೇಳಿಕೆ ನೀಡಿಲ್ಲ.

**(ಮಾನ್ಯ ಎಪಿಪಿ ಅವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟಿ ಸವಾಲಿಗೆ ಅನುಮತಿ ಕೇಳಿರುತ್ತಾರೆ. ಅನುಮತಿ ನೀಡಲಾಯಿತು.)**

**ಪಾಟೀ ಸವಾಲು: ಎಪಿಪಿ ಅವರಿಂದ.**

ದಿನಾಂಕ 01-07-2024 ರಂದು ಬೆಳೀಗ್ಗೆ 11-00 ಗಂಟೆಗೆ ಚಾ.ಸಾ-1 ಮತ್ತು ಅವರ ಮಗ ಬಸಪ್ಪ ಮನೆಯಲ್ಲಿದ್ದಾಗ ಆರೋಪಿತರು ಅವರ ಮನೆಗೆ ಬಂದು ನಮ್ಮೂರಿನ ನಾಗಪ್ಪನ

ಮನೆಯ ಮುಂದೆ ಇರುವ ಲೈಟಿನ ಕಂಬಕ್ಕೆ ಹೊಸ ಬಲ್ಪ್ ಹಾಕುವದಿದೆ ಊರಲ್ಲಿ ಯಾರೂ ಬರುತ್ತಿಲ್ಲ ಬಾ ಎಂದು ಚಾ.ಸಾ-1 ರವರ ಮಗನನ್ನು ಕರೆದಿರುತ್ತಾರೆ ಎಂದರೆ ಸರಿಯಲ್ಲ. ಅವರು ನನ್ನ ಮಗನಿಗೆ ಕರೆಂಟ್ ಕೆಲಸ ಬರುವದಿಲ್ಲ ಎಂದು ಹೇಳಿದರೂ ಸಹ ಲೈನ್ ತೆಗೆಸಿದ್ದೇವೆ ನಾವೆಲ್ಲಾ ನೋಡಿಕೊಳ್ಳುತ್ತೇವೆ ಎಂದು ಹೇಳಿ ಚಾ.ಸಾ-1 ರವರ ಮಗನನ್ನು ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಯಾವುದೇ ಮುಂಜಾಗ್ರತಾ ಕ್ರಮ ಕೈಗೊಳ್ಳದೆ ನಿರ್ಲಕ್ಷತನ ಮತ್ತು ಬೇಜವಾಬ್ದಾರಿತನದಿಂದ ಬೆಳಿಗ್ಗೆ 11-30 ಕ್ಕೆ ಲೈಟಿನ ನಿಚ್ಚಣಿಕೆ ಇಟ್ಟು ಕಂಬ ಹತ್ತಿಸಿ ಕಂಬಕ್ಕೆ ಇರುವ ಹಳೆಯ ಬಲ್ಪ್ ತೆಗೆದು ಹೊಸ ಬಲ್ಪ್ ಹಾಕುತ್ತಿದ್ದಾಗ ಕಂಬದ ವೈಯರ್ ಬಸಪ್ಪನ ಬೆನ್ನ ಹಿಂದೆ ತಾಗಿ ಕುತ್ತಿಗೆ, ಕಾಲುಗಳಿಗೆ, ಬೆನ್ನಿಗೆ ಬಲವಾದ ಸುಟ್ಟ ಗಾಯಗಳಾಗಿದ್ದರಿಂದ ಕೆಳಗೆ ಬಿದ್ದಿರುತ್ತಾನೆ ಎಂದರೆ ಸರಿಯಲ್ಲ. ನಾನು, ಚಾ.ಸಾ-6 ಮತ್ತು 7 ರವರು ಬುಲೆರೋ ವಾಹನದಲ್ಲಿ ಬಸಪ್ಪನನ್ನು ಲಿಂಗಸುಗುರು ಆಸ್ಪತ್ರೆಗೆ ಕರೆದುಕೊಂಡು ಹೋಗಿ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಬಾಗಲಕೋಟೆಯ ಕೆರೂಡಿ ಆಸ್ಪತ್ರೆಗೆ ಹೋಗುತ್ತಿದ್ದಾಗ ಸಂಜೆ 4-00 ಗಂಟೆಗೆ ಗುಣಮುಖನಾಗದೆ ಮೃತಪಟ್ಟಿರುತ್ತಾನೆ. ಕೆರೂಡಿ ಆಸ್ಪತ್ರೆಗೆ ಹೋಗದೆ ವಾಪಸ್ ಲಿಂಗಸುಗೂರು ಆಸ್ಪತ್ರೆಗೆ ಬಂದು ಶವವನ್ನು ಇಟ್ಟು ಪೋಲಿಸ್ ಠಾಣೆಗೆ ಹೋಗಿ ಚಾ.ಸಾ-1 ರವರು ದೂರು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಇದೇ ರೀತಿ ನಾನು ಪೋಲಿಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರ ಸರಿಯಲ್ಲ. ನಿರಾಕರಿಸಿದ ಹೇಳಿಕೆಯನ್ನು ನಿ.ಪಿ-5 ಎಂದು ಗುರುತಿಸಲಾಯಿತು. ಈಗ ನಾವು ಮತ್ತು ಆರೋಇಪತರ ರಾಜಿಯಾಗಿರುತ್ತೇವೆ ಎಂದರೆ ಸರಿ. 1ನೇ ಆರೋಪಿ ನನ್ನ ಅಳಿಯನಾಗಿದ್ದರಿಂದ ನಿ.ಪಿ-5 ರಲ್ಲಿರುವ ವಿಷಯ ಗೊತ್ತಿದ್ದರೂ ಸಹ ಆರೋಪಿತರನ್ನು ಶಿಕ್ಷೆಯಿಂದ ತಪ್ಪಿಸಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲು ಶ್ರೀ ಎಮ್.ಎಸ್.ಪಿ ವಕೀಲರಿಂದ : -</u>**

ಏನೂ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,

ಲಿಂಗಸಗೂರು.